[ Govt. of Karnataka C.R.P. 67]

| Deposition Sheets (RP.No.57) Form No.4 |
|---|

**IN THE COURT OF Addl. CIVIL JUDGE & J.M.F.C., KARKALA.**

**Criminal Case No. 2118/2023**

ಪಿ.ಡಬ್ಲ್ಯು : 4 ಸಿ.ಡಬ್ಲ್ಯು : 3

| | | |
|---|---|---|
| ಸಾಕ್ಷಿದಾರನ ಹೆಸರು | : | ಸುನಿಲ್ ಬಜಂತ್ರಿ |
| ತಂದೆಯ ಹೆಸರು | : | ನಾಗಪ್ಪ |
| ಪ್ರಾಯ | : | 29 ವರ್ಷ |
| ಉದ್ಯೋಗ | : | ಲೈನ್ ಮ್ಯಾನ್ |
| ವಾಸ | : | ನಿಟ್ಟೆ, ಕಾರ್ಕಳ ತಾಲೂಕು |

ದಿನಾಂಕ 02-04-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ನಾನು 1 ನೇ ಆರೋಪಿಯನ್ನು ಅಪಘಾತದ ಸಮಯದಲ್ಲಿ ನೋಡಿರುವುದಿಲ್ಲ. ಚಾಸಾ-1 ನನಗೆ ಪರಿಚಯ ಇರುವುದಿಲ್ಲ. ಚಾಸಾ-2 ನನಗೆ ಪರಿಚಯ ಇರುತ್ತದೆ. ಅವರು ನಿಟ್ಟೆ ಪಂಚಾಯಿತಿ ಸದಸ್ಯರಾಗಿರುತ್ತಾರೆ. ನಾನು ಘಟನಾ ಸಮಯದಲ್ಲಿ ಕಚೇರಿಯಲ್ಲಿ ಇರುತ್ತೇನೆ ಸಮಯ ನನಗೆ ನೆನಪಿರುವುದಿಲ್ಲ. ಅಪಘಾತ ಆದ ನಂತರ ನಾನು ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ಯಾವ ಗಾಡಿಯ ಮಧ್ಯೆ ಅಪಘಾತವಾಯತು ಎಂದು ನನಗೆ ಗೊತ್ತಿಲ್ಲ. ಹೇಗೆ ಅಪಘಾತ ಆಯತು ಮತ್ತು ಯಾರಿಗೆ ಗಾಯವಾಗಿತ್ತು ಎಂದು ನನಗೆ ಗೊತ್ತಿಲ್ಲ. ಘಟನಾ ಸ್ಥಳದಲ್ಲಿ ಕೆಳಗೆ ಬಿದ್ದವರನ್ನು ಉಪಚರಿಸಿ, ಅವರನ್ನು ನಿಟ್ಟೆಯ ಗಾಜರಿಯಾ ಆಸ್ಪತ್ರೆಗೆ ದಾಖಲಿಸಿರುತ್ತೇನೆ. ಆವ್ಯಕ್ತಿ ಮಂಜುನಾಥ ಶೆಟ್ಟಿ ಎಂದು ತಿಳಿಯಿತು. ಅಪಘಾತದಿಂದ ವಾಹನಗಳು ಜಖಂ ಆಗಿರುವುದಿಲ್ಲ. ಆ ವಾಹನವನ್ನು ಯಾರು ಚಲಾಯಿಸುತ್ತಿದ್ದರು ಎಂದು ನನಗೆ ತಿಳಿದಿರುವುದಿಲ್ಲ. ಗಾಯಾಳು ಮಂಜುನಾಥ ಶೆಟ್ಟಿ ಮೃತಪಟ್ಟ ವಿಚಾರವನ್ನು ನಂತರ ತಿಳಿದುಕೊಂಡಿರುತ್ತೇನೆ. ಯಾರ ತಪ್ಪಿನಿಂದ ಅಪಘಾತ ಆಯಿತು ಎಂದು ನನಗೆ ಗೊತ್ತಿಲ್ಲ. ಅಪಘಾತದ ಕಾರಣ ನನಗೆ ಗೊತ್ತಿಲ್ಲ. ಪೋಲೀಸರು ವಿಚಾರಣೆ ಮಾಡಿ ಯಾವುದೇ

ಹೇಳಿಕೆಯನ್ನು ಪಡೆದಿರುವುದಿಲ್ಲ. ನಿಪಿ-6 ರಲ್ಲಿರುವ ಅಪಘಾತಕ್ಕೆ ಒಳಗಾದ ದ್ವಿಚಕ್ರ ವಾಹನವನ್ನು ಮತ್ತು ನಿಪಿ-7 ರಲ್ಲಿರುವ ಹೆಲ್ಮೆಟ್ ನ್ನು ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲು</u> : <u>ಸಹಾಯಕ ಸರ್ಕಾರಿ ಅಭಿಯೋಜಕರು:-</u>

ದಿನಾಂಕ 07-08-2023 ರಂದು ಸಂಜೆ 4.30 ಗಂಟೆಗೆ ಕಾರ್ಕಳ ಕಡೆಯಿಂದ ಪಡುಬಿದ್ರೆ ಕಡೆಗೆ ಮಂಜುನಾಥ ಶೆಟ್ಟಿ ದ್ವಿಚಕ್ರ ವಾಹನವನ್ನು ಚಲಾಯಿಸಿಕೊಂಡು ನಿಟ್ಟೆ ಮೆಸ್ಕಾಂ ಕಚೇರಿಯ ಬಳಿ ವಾಹನದ ಬಲಭಾಗದ ಇಂಡಿಕೇಟರ್ ಹಾಕಿ ಬಲಕ್ಕೆ ತಿರುಗಿಸುತ್ತಿರುವಾಗ ಅವರ ಹಿಂದಿನಿಂದ ಕಾರ್ಕಳ ಕಡೆಯಿಂದ ಪಡುಬಿದ್ರೆ ಕಡೆಗೆ ವ್ಯಾಗನರ್ ಕಾರನ್ನು 1 ನೇ ಆರೋಪಿಯು ಅತೀ ವೇಗ ಹಾಗೂ ಅಜಾಗರೂಕತೆಯಿಂದ ರಸ್ತೆಯ ತೀರಾ ಬಲಬದಿಗೆ ಚಲಾಯಿಸಿ ದಿವಚಕ್ರ ವಾಹನಕ್ಕೆ ಹಿಂದಿನಿಂದ ಡಿಕ್ಕಿ ಹೋಡೆದರು ಎಂದರೆ ಸರಿಯಲ್ಲ. ಆಗ ದ್ವಿಚಕ್ರ ವಾಹನ ಸವಾರ ಮಂಜುನಾಥ ಶೆಟ್ಟಿ ರಸ್ತೆಗೆ ಬಿದ್ದರು ಹಾಗೂ ಅವರ ತಲೆಯಿಂದ ಹೆಲ್ಮೆಟ್ ಕೆಳಗೆ ಎಸೆಯಲ್ಪಟ್ಟಿತ್ತು ಎಂದರೆ ಸರಿಯಲ್ಲ. ಡಿಕ್ಕಿ ಹೊಡೆದ ಕಾರು ದ್ವಿಚಕ್ರ ವಾಹನವನ್ನು ಮುಂದಕ್ಕೆ ದೂಡಿಕೊಂಡು ಹೋಗಿ ರಸ್ತೆಯ ಬದಿಯಲ್ಲಿ ನಿಂತಿತ್ತು ಎಂದರೆ ಸರಿಯಲ್ಲ. ನಾನು ಹಾಗೂ ಅದೇ ರಸ್ತೆಯಲ್ಲಿ ಹಾದುಹೋಗುವ ಇತರ ವಾಹನದವರು ಇದ್ದವರ ಬಳಿ ಹೋಗಿ ನೋಡಿದಾಗ ಅವರ ಎದೆಗೆ ಮುಖಕ್ಕೆ ಬಲಭುಜಗಳಿಗೆ ಹಾಗೂ ಬಲಕೈ ಗಳಿಗೆ ತರಚಿದ ಹಾಗೂ ಗುದ್ದಿದ ಜಖಂ ಆಗಿತ್ತು ಎಂದರೆ ಸರಿಯಲ್ಲ. ಅಪಘಾತವಾದ ವಾಹನಗಳು ಅಪಘಾತದಿಂದ ಜಖಂ ಗೊಂಡಿತ್ತು ಎಂದರೆ ಸರಿಯಲ್ಲ. ಅಪಘಾತ ಪಡಿಸಿದ ವ್ಯಾಗನರ್ ಕಾರು 1 ನೇ ಆರೋಪಿ ಚಲಾಯಿಸುತ್ತಿದ್ದರು ಎಂದರೆ ಸರಿಯಲ್ಲ. ಈ ಅಪಘಾತಕ್ಕೆ 1 ನೇ ಆರೋಪಿಯ ಅತೀವೇಗ ಹಾಗೂ ಅಜಾಗರೂಕತೆಯ ಚಾಲನೆಯೇ ಕಾರಣ ಎಂದರೆ

ಸರಿಯಲ್ಲ. ಈ ಬಗ್ಗೆ ದಿನಾಂಕ 08-08-2023 ರಂದು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಸದರಿ ಹೇಳಿಕೆಯ ಭಾಗಾಂಶವನ್ನು ನಿಪಿ-11 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು</u> : ಆರೋಪಿ ಪರ : ಶ್ರೀ ಎಸ್ ಕೆ ಎಸ್ ವಕೀಲರಿಂದ :: ಏನು ಇಲ್ಲ.

ಮರುವಿಚಾರಣೆ: ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ